ಆಮೇಲೆ ಸ್ಥಳ ಸರಿಯಾದ ಕಡೆ ನೋಡಿಲ್ಲವೆಂದು ತಾವು ಹೇಳಿದ್ದೀರಿ. ಈಗ ನಾವು ಎರಡು ಹಂತದಲ್ಲಿ ಈ ಶಾಲಾ ಕೊಠಡಿಗಳನ್ನು ಮಂಜೂರು ಮಾಡಿದ್ದೇವೆ. ಈ ವರ್ಷದಲ್ಲೇ ನಮಗೆ 40 ಕೋಟಿ ಅಥವಾ 50 ಕೋಟಿ ಆಪರೇಷನ್ ಬ್ಲಾಕ್‌ಬೋರ್ಡ್‌ನಲ್ಲಿ ಖರ್ಚುಮಾಡಬೇಕಾಗಿತ್ತು. ಅದಕ್ಕಾಗಿ ಮೊದಲನೆಯ ಹಂತದಲ್ಲಿ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸ್ ಹತ್ತಿರ ಪಟ್ಟಿ ತರಿಸಿ ಅದರ ಪ್ರಕಾರ ಕಟ್ಟಡ ಕಟ್ಟಲು ಹಣವನ್ನು ಬಿಡುಗಡೆ ಮಾಡಿದೆವು. ಎರಡನೇ ಹಂತದಲ್ಲಿ ಶಾಸಕರು ಎಲ್ಲೆಲ್ಲಿ ಕವರ್ ಮಾಡಿಲ್ಲವೆಂದು ಹೇಳಿದ್ದರೋ ಅಲ್ಲಿ ಕೈಗೆತ್ತಿಕೊಂಡೆವು. ಈಗ ಮತ್ತೆ ಮೊನ್ನೆ ಮೂರು ವಾರದ ಹಿಂದೆ ಹೈದ್ರಾಬಾದ್ ಪ್ರದೇಶ ಅಭಿವೃದ್ಧಿ ಮಂಡಲಿ ಮೀಟಿಂಗ್ ನಡೆಯಿತು; ಅಲ್ಲಿ ತಾರತಮ್ಯ ಎಲ್ಲಿಲ್ಲಿ ಆಗಿದೆ ಅದನ್ನೆಲ್ಲ ಸೇರಿಸಿ 20 ನೇ ತಾರೀಖು ಅಂದರೆ ನಾಳೆಯೊಳಗೆ ತಾವು ಒಂದು ಪಟ್ಟಿ ಕೊಡಬೇಕೆಂದು ನಿರ್ಣಯವಾಗಿದೆ. ಅದರಂತೆ ತಾವು ಪಟ್ಟಿ ಕೊಟ್ಟರೆ ಅದರಂತೆ ಹೆಚ್ಚು ಕೆಲಸ ತೆಗೆದು ಕೊಳ್ಳಲು ಸಾಧ್ಯವಾದರೆ ಆ ಕೆಲಸಗಳನ್ನು ಸಹ ಕೈಗೊಳ್ಳುತ್ತೇವೆ.

ವಿಷಯ :– ವೈದ್ಯಕೀಯ ಕಾಲೇಜುಗಳು ನಿಗದಿ ಮಾಡಿದ್ದ ಸೀಟುಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 144 (471)

ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ವರ್ಷ ಯಾವ ಯಾವ ವೈದ್ಯಕೀಯ ಕಾಲೇಜುಗಳು ನಿಗದಿ ಮಾಡಿದ್ದ ಸೀಟುಗಳಿಗಿಂತ ಹೆಚ್ಚಿಗೆ ಸೀಟುಗಳನ್ನು ಹೊಂದಿವೆ ?

ಆ) ಇದಕ್ಕೆ ಭಾರತೀಯ ವೈದ್ಯಕೀಯ ಮಂಡಲಿಯ ಪೂರ್ವಾನುಮತಿ ದೊರಕಿದೆಯೇ ?

ಇ) ಶಿಕ್ಷಕ ಮತ್ತು ವಿದ್ಯಾರ್ಥಿಗಳ ಅನುಪಾತವನ್ನು ಯಾವ ವೈದ್ಯಕೀಯ ಕಾಲೇಜು ಪಾಲಿಸಿಲ್ಲ ?

ಈ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :–

ಅ) ಈ ಕೆಳಕಂಡ ವೈದ್ಯಕೀಯ ಕಾಲೇಜುಗಳು ಸರ್ಕಾರವು ನಿಗದಿ ಮಾಡಿದ ಸೀಟುಗಳಿಗಿಂತ ಹೆಚ್ಚಿಗೆ ಸೀಟುಗಳನ್ನು ಹೊಂದಿವೆ :

1) ಜೆ. ಜೆ. ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ
2) ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು.
3) ಆದಿಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ಳೂರು.
4) ಬಿ.ಎಲ್.ಡಿ.ಇ.ಎ. ವೈದ್ಯಕೀಯ ಕಾಲೇಜು, ವಿಜಾಪುರ.
5) ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ.

ಆ) ಇಲ್ಲ.

ಇ) ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜೊಂದನ್ನು ಬಿಟ್ಟು ಉಳಿದ ಯಾವ ವೈದ್ಯಕೀಯ ಕಾಲೇಜುಗಳೂ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಅನುಪಾತವನ್ನು (Ratio) ಪಾಲಿಸಿಲ್ಲ.

ಈ) ಸದ್ಯಕ್ಕೆ ಯಾವ ಕ್ರಮಗಳನ್ನು ಕೈಗೊಂಡಿಲ್ಲ.

ಶ್ರೀ ಜಿ. ರಾಜುಗೌಡ :– ಯಾವುದಾದರೂ ಸರ್ಕಾರಿ ವೈದ್ಯ ಕಾಲೇಜಾಗಲಿ ಅಥವಾ ಖಾಸಗಿ ವೈದ್ಯ ಕಾಲೇಜಾಗಲಿ ನಿಗದಿ ಪಡಿಸಿರುವ ಸೀಟಿಗಿಂತ ಹೆಚ್ಚಿಗೆ ತೆಗೆದುಕೊಳ್ಳಬೇಕಾದರೆ ಅದಕ್ಕೆ ಭಾರತೀಯ ವೈದ್ಯಕೀಯ ಮಂಡಲಿಯ ಪರವಾನಿಗೆ ಬೇಕು. ನಮ್ಮ ಕರ್ನಾಟಕದಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿಗೆ ತೆಗೆದುಕೊಂಡಿರುವ ಕಾಲೇಜುಗಳ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರೆ ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದೀರಿ. ಬಹುಶಃ ಈ ಕಾಲೇಜುಗಳು ಸರ್ಕಾರದ ನಿಯಂತ್ರಣದಲ್ಲಿವೆಯೇ ಅಥವಾ ಇಲ್ಲವೋ ಎಂಬುದನ್ನು ತಿಳಿಸುತ್ತೀರಾ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಕೆಲವು ಕಾಲೇಜುಗಳು ಸರ್ಕಾರದ ವ್ಯಾಪ್ತಿಯಲ್ಲಿವೆ ಕೆಲವು ಖಾಸಗೀ ಕಾಲೇಜುಗಳು ಸಹ ಇವೆ.

ಶ್ರೀ ಜಿ. ರಾಜುಗೌಡ :– ಕೇವಲ ಖಾಸಗೀ ಕಾಲೇಜಿಗೆ ಮಾತ್ರ ಸೀಟುಗಳನ್ನು ನಿಗದಿಪಡಿಸಿತ್ತು ಎಂದು ಹೇಳಿದ್ದೀರಿ; ಆದರೆ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ 150 ಸೀಟುಗಳನ್ನು ನಿಗದಿ ಮಾಡಿದ್ದರೂ ಸಹ ಅವರು 200 ಸೀಟನ್ನು ತೆಗೆದುಕೊಂಡಿದ್ದಾರೆ. ಅವರಿಗೆ ಪೂರ್ವಾನುಮತಿ ಇಲ್ಲ. ಇದರ ಬಗ್ಗೆ ತಾವು ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಮಾನ್ಯ ಅಧ್ಯಕ್ಷರೇ, ಈ ಕೆಲವು ಕಾಲೇಜುಗಳಲ್ಲಿ ಮಕ್ಕಳನ್ನು ಸೇರಿಸಿಕೊಂಡುಬಿಟ್ಟಿದ್ದರು. ನಾವು ಆ ಮಕ್ಕಳಿಗೆ ತೊಂದರೆಯಾಗುತ್ತದೆ ಎಂದು ಹೇಳಿ ಅವರಿಗೆ ರೆಕಗ್ನಿಷನ್‌ನ್ನು ನಾವು ಕೊಡಬೇಕಾಗಿ ಬಂತು. ಅದಲ್ಲದೇ ತಾವು ಕೇಳಿರುವಹಾಗೆ ಐ. ಎಂ. ಸಿ. ಅವರು ಅದನ್ನು ಒಪ್ಪಿಕೊಂಡಿಲ್ಲದೇ ಇದ್ದರೂ ಇನ್ನು ಮುಂದೆ ಪರೀಕ್ಷೆಗಳು ಆಗುವುದರಲ್ಲಿ ನೀವು ಅವರ ಪರ್ಮಿಷನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ಅವರನ್ನು ಎಚ್ಚರಿಸಿದ್ದೇವೆ.

ಶ್ರೀ ಜಿ. ರಾಜುಗೌಡ :– ಈಗ ತಾವು ನಿಗದಿಪಡಿಸಿದ ಸೀಟಿಗಿಂತ ಜಾಸ್ತಿ ತೆಗೆದುಕೊಂಡಿದ್ದಾರೆ ಎನ್ನುವುದು ಒಂದು. ಎರಡನೆಯದಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಅನುಪಾತ (ರೇಷ್ಯೋ) ಏನು ಇದೆ, ಅದೂ ಕೂಡ ಜಾಸ್ತಿ ಇಲ್ಲ. ಈ ವೈದ್ಯಕೀಯ ಕಾಲೇಜುಗಳಿಗೆ 249 ಹುದ್ದೆಗಳು ಮಂಜೂರಾಗಿವೆ.

(ಗೊಂದಲ)

ಅಧ್ಯಕ್ಷರು :– ಇದು ಬಗೆಹರಿಯದಿರುವ ಸಮಸ್ಯೆ.

ಶ್ರೀ ಜಿ. ರಾಜುಗೌಡ :– ಕೇವಲ 124 ಜನ ಲೆಕ್ಚರರ್ ಇದ್ದಾರೆ. 74 ಪ್ರೊಫೆಸರ್ಸ್ ಹುದ್ದೆಗಳು ಖಾಲಿ ಇವೆ. ಎಲ್ಲಾ ಕಡೆಯಲ್ಲಿಯೂ ಖಾಲಿ ಇವೆ ವಿದ್ಯಾರ್ಥಿಗೂ ಮತ್ತು ಲೆಕ್ಚರರ್ಸ್‌ಗೂ ನೋಡಿದಾಗ ಒಂದಕ್ಕೊಂದಕ್ಕೆ 40 ರಷ್ಟು ಕೊರತೆ ಇದೆ. ಇದೆಲ್ಲವನ್ನು ನೋಡಿಯೂ ಸಹ ಸರ್ಕಾರ ಮೌನವಾಗಿರುವುದರಿಂದ ಈ ಕಾಲೇಜುಗಳು ತಮ್ಮ ನಿಯಂತ್ರಣದಲ್ಲಿ ಇಲ್ಲ ಎಂದು ಅರ್ಥವಾಗುತ್ತದೆ. ಇದು ನಿಜವೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಕೊನೆಯ ಪ್ರಶ್ನೆಯನ್ನು ರಿಪೀಟ್ ಮಾಡಿ.

ಅಧ್ಯಕ್ಷರು :– ನಿಮ್ಮ ನಿಯಂತ್ರಣದಲ್ಲಿ ಈ ಕಾಲೇಜುಗಳು ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ರೇಷಿಯೋ ಕಡಿಮೆ ಇರುವುದು ನಿಜ, ವಾಸ್ತವ.

ಶ್ರೀ ಜಿ. ರಾಜುಗೌಡ :– 40 ಪರ್‌ಸೆಂಟ್ ಕಡಿಮೆ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಮಾನ್ಯ ಅಧ್ಯಕ್ಷರೇ, ರೇಷ್ಯೋ ಕಡಿಮೆ ಇದೆ ಎನ್ನುವುದು ಮಾತ್ರ ನಿಜ. ಆದರೆ ನಾವು ಈಗ ಟೀಚಿಂಗ್ ಕೇಡರ್‌ಗೆ ಪರಿವರ್ತನೆ ಮಾಡುವುದಕ್ಕೆ ಆರ್ಡರ್ಸ್‌ನ್ನು ಮಾಡಿದ್ದೇವೆ. ಪಾಗೆಯೇ ಟೀಚರ್ಸ್ ಬಂದ ತಕ್ಷಣ ನಾವು ರೇಷ್ಯೋವನ್ನು ಸರಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಪಾಗೆಯೇ ಇವರುಗಳಿಗೆಲ್ಲಾ ಜಾಸ್ತಿ ಮಾಡಿರುವುದು ಇದು ಎಲ್ಲರಿಗೂ ಗೊತ್ತಾಗಿದೆ. ತಾವೇ ಹೇಳಿದ ಹಾಗೆ ಈ ಪ್ರಶ್ನೆಯನ್ನು ಅಷ್ಟು ಸುಲಭವಾಗಿ ನಾವು ಸಾಲ್ವ್ ಮಾಡುವುದಕ್ಕೆ ಆಗುತ್ತಿಲ್ಲ. ಆದಷ್ಟೂ ಮಟ್ಟಿಗೆ ಐ. ಎಂ. ಸಿ. ಪರ್ಮಿಷನ್ನು ತೆಗೆದುಕೊಂಡು ಇದನ್ನು ರೆಗ್ಯುಲರೈಸ್ ಮಾಡಿಕೊಳ್ಳುವುದಕ್ಕೆ ನಾವು ಒಂದು ಕಮಿಟಿಯನ್ನು ಮಾಡಿ ಅದರ ಮುಖಾಂತರ ಇದನ್ನು ಸರಿ ಮಾಡಿಸಬೇಕು ಎಂದು ಬಹಳ ಪೆಚ್ಚಾಗಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದರಿಂದ ಮಾನ್ಯ ಸದಸ್ಯರು ನನ್ನ ಉತ್ತರದಿಂದ ತೃಪ್ತಿಯಾಗುತ್ತಾರೆ ಎಂದು ನಾನು ನಂಬಿಕೊಂಡಿದ್ದೇನೆ.

ಶ್ರೀ ಜಿ. ರಾಜುಗೌಡ :– ತೃಪ್ತಿಯಾಗಲಿಲ್ಲ; ಸ್ಯಾಂಕ್ಷನ್ಡ್ ಪೋಸ್ಟ್ 249 ಇದೆ.

ಅಧ್ಯಕ್ಷರು :– ತಾವು ಇಡೀ ದಿವಸ ಪ್ರಶ್ನೆ ಕೇಳಿದರೆ ನಿಮಗೆ ತೃಪ್ತಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ

ಶ್ರೀ ಬಸವರಾಜ ರಾಯರೆಡ್ಡಿ :– ನಿನ್ನೆಯಿಂದ ಅನ್‌ಸ್ಟಾರ್ಡ್ ಕ್ವಶ್ಚನ್‌ಗಳಿಗೆ ಉತ್ತರಗಳನ್ನು ಸದನದಲ್ಲಿ ನೀಡುತ್ತಿಲ್ಲ

ಅಧ್ಯಕ್ಷರು :– ನಾನು ಇನ್ನೂ ಅದಕ್ಕೆ ಬಂದಿಲ್ಲ.

ವಿಷಯ :– ಮೈಸೂರಿನಲ್ಲಿ ಅಂಗವಿಕಲರಿಗಾಗಿ ವಿಶೇಷ ಪಾಲಿಟೆಕ್ನಿಕ್.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 183 (491)

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?